ಸೆಪ್ಟೆಂಬರ್ 2024





ದಿ. ಶ್ರೀ ಅನಂತಕುಮಾರ
ಸಂಸ್ಥಾಪಕರು, ಅದಮ್ಯಚೇತನ,
ಮಾಜಿ ಕೇಂದ್ರ ಸಚಿವರು ಮತ್ತು ಲೋಕಸಭಾ ಸದಸ್ಯರು

# ಅದಮ್ಯ ಚೇತನ

ಓ ನನ್ನ ಚೇತನ ಆಗು ನೀ ಅನಿಕೇತನ

## ಗಣೇಶ ಬಂದ, ಏನೇನ್ ತಂದ?



'ಗಣೇಶ ಬಂದ, ಗೌರಿಯ ತಂದ' ಎಂದು ನಾವೆಲ್ಲ ಹೇಳುತ್ತಿದ್ದೆವು. ಈಗ ಗೌರಿ-ಗಣೇಶರ ಜೊತೆ ಜೊತೆಗೇ ಪರಿಸರಕ್ಕೆ ಏನೆಲ್ಲ ಬಗೆಯ ತೊಂದರೆಗಳೂ ಬರತೊಡಗಿವೆ. ಏನೇನು ತೊಂದರೆ, ಅದನ್ನು ಪಟ್ಟಿ ಮಾಡಬಲ್ಲಿರಾ? ಪ್ಲಾಸ್ಟಿಕ್‌ನಿಂದ ತಯಾರಿಸಿದ ನಾನಾ ಬಗೆಯ ಅಲಂಕಾರಿಕ ಸಾಮಗ್ರಿಗಳೂ ಅವನ ಜೊತೆ ಬರುತ್ತವೆ. ಕೆಲವು ಕಡೆ ರಾತ್ರಿಯ ವೇಳೆಯಲ್ಲಿ ಪೆಂಡಾಲ್ ಮುಂದೆ ಧ್ವನಿವರ್ಧಕದ ಅಬ್ಬರದ ಸಂಗೀತ ಕೇಳುತ್ತಿರುತ್ತದೆ. ಓದುವ ಮಕ್ಕಳಿಗೆ ಕಿರಿಕಿರಿ; ವಯಸ್ಸಾದ ಹಿರಿಯರಿಗೆ ನಿದ್ದೆ ಬರುವುದಿಲ್ಲ. ಕೆಲವು ಕಡೆ ಪಟಾಕಿಯನ್ನು ಸುಡುತ್ತಾರೆ. ಸದ್ದು, ಹೊಗೆಯ ಮಾಲಿನ್ಯ ತುಂಬ ಜಾಸ್ತಿ ಇರುತ್ತದೆ. ಗಣಪನನ್ನೂ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿ.ಓ.ಪಿ) ಎಂಬ ಬಿಳಿ ಸಿಮೆಂಟನ್ನು ಬಳಸಿಯೇ ನಿರ್ಮಿಸುತ್ತಾರೆ. ಅದಕ್ಕೆ ಹಚ್ಚಿದ ಎನಮೆಲ್ ಬಣ್ಣ ಯಾರ ಆರೋಗ್ಯಕ್ಕೂ ಒಳ್ಳೆಯದಲ್ಲ. ಅಂಥ ಗಣೇಶನನ್ನು ನೀರಲ್ಲಿ ವಿಸರ್ಜನೆ ಮಾಡಿದಾಗ, ಜಲಚರಗಳ ಹೊಟ್ಟೆಗೆ ಈ ವಿಷ ನೇರವಾಗಿ ಸೇರುತ್ತದೆ. ವಿಸರ್ಜನೆಯ ನಂತರ ಎಲ್ಲೆಲ್ಲೂ ಪ್ಲಾಸ್ಟಿಕ್ ಮಾಲಿನ್ಯ ಚೆಲ್ಲಾಪಿಲ್ಲಿ ಬಿದ್ದಿರುತ್ತದೆ. ಅದನ್ನು ಸುಟ್ಟರೆ ಉಗ್ರ ವಿಷಗಳು ನಮ್ಮ ಶ್ವಾಸಕೋಶಕ್ಕೂ ಸೇರುತ್ತದೆ. ಅಂತೂ ವಾಯುಮಾಲಿನ್ಯ, ಶಬ್ದ ಮಾಲಿನ್ಯ, ಜಲಮಾಲಿನ್ಯ, ನೆಲಮಾಲಿನ್ಯ, ದೃಶ್ಯಮಾಲಿನ್ಯ... ಹೀಗೆ ಎಲ್ಲ ಬಗೆಯ ಮಾಲಿನ್ಯ ಗಣೇಶನ ಹೆಸರಿನಲ್ಲಿ ಕಾಣಿಸಿಕೊಳ್ಳುತ್ತವೆ.

ಗಣೇಶ ಎಂದರೆ ಜೀವಲೋಕದ ಪರಮಮಿತ್ರ ಎನಿಸಿದ ದೇವರು. ಅವನಿಗೆ ಹಾವೂ ಬೇಕು, ಇಲಿಯೂ ಬೇಕು, ಹುಲ್ಲುಗರಿಕೆಯೂ ಬೇಕು, ಕೆರೆಯ ಕೆಸರೂ ಬೇಕು. ಅಂಥ ನಿಸರ್ಗಪ್ರೇಮಿ ದೇವರ ಮೇಲೆ ನಮಗೆ ಶುದ್ಧ ಭಕ್ತಿ ಇದ್ದರೆ ಯಾವ ಮಾಲಿನ್ಯ ಹೊಮ್ಮಿಸದೇ ಹಬ್ಬವನ್ನು ಆಚರಿಸಬಹುದು. ಗಣಪನ ಮೂರ್ತಿಯನ್ನು ಮಣ್ಣಿನಿಂದ ಮಾಡಿ ಸಹಜ ಬಣ್ಣಗಳನ್ನೇ ಲೇಪಿಸಬಹುದು. ಸರಳವಾಗಿ ಹೂವು, ಸಸ್ಯಗಳಿಂದ ಅಲಂಕಾರ ಮಾಡಬಹುದು. ಹಬ್ಬ ಮುಗಿದ ಮೇಲೂ ಸುತ್ತಲಿನ ಪರಿಸರ ಶುಚಿಯಾಗಿರುವಂತೆ ನೋಡಿಕೊಳ್ಳಬಹುದು.

## ನೆಲಮಟ್ಟದಲ್ಲಿ ಓಝೋನ್




ಸೆಪ್ಟೆಂಬರ್ 16ರಂದು ನಾವೆಲ್ಲ 'ವಿಶ್ವ ಓಝೋನ್' ದಿನ ಎಂದು ಆಚರಿಸುತ್ತೇವೆ. ವಾಯುಮಂಡಲದ 25 ಕಿ.ಮೀ. ಎತ್ತರದಲ್ಲಿ ಓಝೋನ್ ಪದರ ಇದೆ; ಅನ್ಯಲೋಕದಿಂದ ಬರುವ ಅಪಾಯಕಾರಿ ಕಿರಣಗಳನ್ನು ಅದು ತಡೆಹಿಡಿದು ನಮ್ಮನ್ನು ರಕ್ಷಿಸುತ್ತದೆ. ಆದರೆ ನಾವು ಬಳಸುವ ಕೆಮಿಕಲ್‌ಗಳಿಂದಾಗಿ ಅದು ಚಿಂದಿಚಿಂದಿ ಆಗುತ್ತಿದೆ. ಹೀಗೆಂದು ನಾವು ಪಾಠಗಳಲ್ಲಿ ಓದುತ್ತೇವೆ. ಅದೆಲ್ಲ ಸರಿ. ಆದರೆ ಈಗ ಅಂಥ ಅಪಾಯಕಾರಿ ಕೆಮಿಕಲ್‌ಗಳ ಉತ್ಪಾದನೆ ಕಡಿಮೆ ಆಗುತ್ತಿದೆ. ಓಝೋನ್ ಪದರ ರಿಪೇರಿ ಆಗುತ್ತಿದೆ. ಆದರೆ ಇತ್ತ ನೆಲಮಟ್ಟದಲ್ಲಿ ಓಝೋನ್ ಹೆಚ್ಚಾಗುತ್ತಿದೆ. ಬಿಸಿಲಲ್ಲಿ ವಾಹನಗಳು ಹೊಗೆಯನ್ನು ಕಕ್ಕುತ್ತಿದ್ದರೆ ಅಲ್ಲಿ ಓಝೋನ್ ಉತ್ಪನ್ನವಾಗುತ್ತದೆ. ಅದರಿಂದ ಅಸ್ತಮಾ, ಕೆಮ್ಮು, ತಲೆನೋವು ಮುಂತಾದ ಕಾಯಿಲೆಗಳು ನಮ್ಮಲ್ಲಿ ಹೆಚ್ಚಾಗುತ್ತವೆ. ಎತ್ತರದಲ್ಲಿ ಓಝೋನ್ ನಮ್ಮ ಮಿತ್ರ, ನೆಲಮಟ್ಟದಲ್ಲಿ ಓಝೋನ್ ನಮಗೆ ಶತ್ರುವಾಗುತ್ತದೆ.

## ಸ್ವಾತಿ ಮಳೆ, ಕಪ್ಪೆಚಿಪ್ಪು ಮತ್ತು ಮುತ್ತು



ಅಶ್ವಿನಿ, ಭರಣಿ, ಕೃತಿಕಾ, ರೋಹಿಣಿ.. ಹೀಗೆ 27 ನಕ್ಷತ್ರಗಳ ಹೆಸರುಗಳನ್ನೂ ಬಾಯಿಪಾಠ ಮಾಡಿದ್ದೀರಿ ತಾನೆ? ಅದರಲ್ಲಿ 15ನೇ ಕ್ರಮಾಂಕದ 'ಸ್ವಾತಿ' ನಕ್ಷತ್ರದ ಬಗ್ಗೆ ವಿಶಿಷ್ಟ ನಂಬಿಕೆ ಇದೆ. ಆ ದಿನ ಬೀಳುವ ಒಂದು ಮಳೆಹನಿಯಿಂದಾಗಿ, ಸಮುದ್ರದ ತಳದಲ್ಲಿ ಜೀವಿಸುವ ಒಂದು ಬಗೆಯ ಕಪ್ಪೆಚಿಪ್ಪಿನಲ್ಲಿ ಪಳಪಳ ಹೊಳೆಯುವ ಮುತ್ತು ಸೃಷ್ಟಿಯಾಗುತ್ತದೆ ಎಂಬ ನಂಬಿಕೆ ನಮ್ಮಲ್ಲಿದೆ. ಅದು ನಂಬಿಕೆ ಅಷ್ಟೆ. ವಾಸ್ತವ ಏನೆಂದರೆ, ಮೃದ್ವಂಗಿ ಬೆಳೆಯುವಾಗ ತನ್ನ ಸುತ್ತಲೂ ರಕ್ಷಣೆಗೆಂದು ಗೂಡಿನಂತೆ ಸುಣ್ಣದ ಪದರವನ್ನು ಬೆಳೆಸಿಕೊಳ್ಳುತ್ತ ಹೋಗುತ್ತದೆ. ನೀರು, ಆಹಾರ ಮತ್ತು ಗಾಳಿ ಆ ಚಿಪ್ಪಿನೊಳಗೆ ಬಂದು ಹೋಗುತ್ತಿರುತ್ತದೆ. ಅವುಗಳ ಜೊತೆ ಅಕಸ್ಮಾತ್ ಒಂದು ಮರಳುಕಣ ಸೇರಿಕೊಂಡರೆ ಮೃದ್ವಂಗಿಯ ಆ ಮೃದುವಾದ ದೇಹಕ್ಕೆ ಉರಿ, ತುರಿಕೆ ಆಗುತ್ತದೆ ತಾನೆ? ಹಾಗೆ ಆಗದಂತೆ, ಪಿಂಕ್ಟಾಡಾ ಪ್ರಭೇದದ ಮೃದ್ವಂಗಿ ಆ ಮರಳು ಕಣದ ಸುತ್ತ ಅಂಟುರಸವನ್ನು ಸ್ರವಿಸಿ ಚಂದದ ಸುಣ್ಣದ ಪೊರೆಯನ್ನು ನಿರ್ಮಿಸಿಕೊಳ್ಳುತ್ತದೆ. ಅದೇ ಮುತ್ತು! ಬೆಳಕಿನಲ್ಲಿ ಅದು ಸಪ್ತವರ್ಣಗಳಲ್ಲಿ ಕೋರೈಸುತ್ತದೆ. ತೀರಾ ಅಪರೂಪಕ್ಕೊಮ್ಮೆ ಯಾವುದೋ ದುರದೃಷ್ಟಕರ ಮೃದ್ವಂಗಿಗೆ ಮಾತ್ರ ಮರಳುಕಣದ ಕಿರಿಕಿರಿ ಉಂಟಾಗುವುದರಿಂದ ತೀರ ಅದೃಷ್ಟವಿದ್ದವರಿಗೆ ಮಾತ್ರ ಮುತ್ತು ಇರುವ ಕಪ್ಪೆಚಿಪ್ಪು ಸಿಗುತ್ತದೆ. ಆದ್ದರಿಂದಲೇ ಮುತ್ತಿಗೆ ಅಷ್ಟೊಂದು ಬೆಲೆ. ಅಪರೂಪಕ್ಕೆ ಒಂದೇ ಚಿಪ್ಪಿನಲ್ಲಿ ಎರಡು ಮೂರು ಮುತ್ತುಗಳೂ ಸಿಗಬಹುದು. ಸಮುದ್ರದ ನೀರಲ್ಲೇ ಮುಳುಗೇಳುವ ಕಪ್ಪೆಚಿಪ್ಪಿನಲ್ಲಿ ಮಳೆಹನಿ ಬಿದ್ದರೆ ಮಾತ್ರ ಮುತ್ತು ಸೃಷ್ಟಿಯಾಗುತ್ತದೆ ಎಂಬ ಮಾತು ಸರಿಯಲ್ಲ.

ಈಗೇನು, ಸಿಹಿನೀರಲ್ಲೂ ಮನೆಯ ಉಪ್ಪರಿಗೆಯ ಟ್ಯಾಂಕ್‌ನಲ್ಲೂ ಕಪ್ಪೆಚಿಪ್ಪುಗಳನ್ನು ಬೆಳೆಸಿ ಅದರ ಚಿಪ್ಪಿನೊಳಗೆ ಬೇಕಂತಲೇ ಉರಿಕಣಗಳನ್ನು ತೂರಿಸಿ ಕೃತಕ ಮುತ್ತನ್ನು ಸೃಷ್ಟಿ ಮಾಡಬಹುದು. ಚಿಕ್ಕ ಗಾತ್ರದ ಗಣೇಶ, ಲಕ್ಷ್ಮೀ, ಶಿಲುಬೆ, ನಕ್ಷತ್ರವೇ ಮುಂತಾದ ಧಾರ್ಮಿಕ ಲಾಂಛನಗಳನ್ನೂ ಸೃಷ್ಟಿ ಮಾಡಿ ಮಾರುವವರಿದ್ದಾರೆ. ಪ್ಲಾಸ್ಟಿಕ್ಕಿನ ಅಗ್ಗದ ಮುತ್ತುಗಳಂತೂ ಎಲ್ಲೆಲ್ಲೂ ಸಿಗುತ್ತವೆ.

## ಗೋವು ಎಂದರೆ ನಾಯಿ; ನಾಯಿ ಎಂದರೆ ನೀಯು



ಚೀನೀ ಭಾಷೆಯಲ್ಲಿ ನಾಯಿಗಳಿಗೆ ಏನನ್ನುತ್ತಾರೆ ಗೊತ್ತೆ? ಗೋವು (Gou) ಎನ್ನುತ್ತಾರೆ! ನಮ್ಮ ದೇಶದಲ್ಲಿ ಹೇಗೆ ಬೀದಿ ಬೀದಿಗಳಲ್ಲಿ ಗೋವುಗಳು ಕಾಣುತ್ತವೆಯೊ ಹಾಗೇ ಚೀನಾದಲ್ಲೂ ಎಲ್ಲೆಲ್ಲೂ ಬೀಡಾಡಿ 'ಗೌ'ಗಳು ಕಾಣಸಿಗುತ್ತವೆ. ತಿಂಡಿ ತೋರಿಸಿ ಕರೆದರೆ, ಈ ಗೌಗಳು ಬಾಲ ಅಲ್ಲಾಡಿಸಿ ಬೌ ಬೌ ಎನ್ನುತ್ತವೆ. ಹತ್ತಿರ ಬಂದರೆ ಅವುಗಳನ್ನು ಹಿಡಿದು ಕಸಾಯಿಖಾನೆಗೆ ಒಯ್ದು, ಮಾಂಸವನ್ನು ಅಡುಗೆ ಮಾಡಿ ತಿನ್ನುತ್ತಾರೆ. ಹಾಗಿದ್ದರೆ ಚೀನೀಯರು ಗೋವುಗಳಿಗೆ ಏನೆಂದು ಕರೆಯುತ್ತಾರೆ? ನಾಯಿ (Nai) ಅನ್ನುತ್ತಾರೊ? ಇಲ್ಲ ಅವರು ಗೋವುಗಳಿಗೆ 'ನೀಯು' (Niu) ಅನ್ನುತ್ತಾರೆ. ಈಚೀಚೆಗೆ ಬೀದಿ ನಾಯಿಗಳ ಸಂಖ್ಯೆ ಕಡಿಮೆ ಆಗಿರುವುದರಿಂದ ಸಾಕಿದ ನಾಯಿಗಳನ್ನೂ ಕದ್ದೊಯ್ಯುವವರ ಸಂಖ್ಯೆ ಹೆಚ್ಚಾಗಿದೆಯಂತೆ. ಹಾಗಿದ್ದರೆ ಕಾವಲು ನಾಯಿಗಳ ಕಾವಲಿಗೆ ಯಾವ ಪ್ರಾಣಿಯನ್ನು ಸಾಕಿಕೊಳ್ಳುತ್ತಾರೊ? ಯಾವುದಾದರೂ ಬಲಿಷ್ಠ ತಳಿಯ ನೀಯುವನ್ನು?

## ಸುಭಾಷಿತ

छायामन्यस्य कुर्वन्ति तिष्ठन्ति स्वयमातपे ।
फलान्यपि परार्थाय वृक्षाः सत्पुरुषा इव ॥

ಛಾಯಾಮನ್ಯಸ್ಯ ಕುರ್ವಂತಿ ತಿಷ್ಠಂತಿ ಸ್ವಯಮಾತಪೇ।
ಫಲಾನ್ಯಾಪಿ ಪರಾರ್ಥಾಯ ವೃಕ್ಷಾಃ ಸತ್ಪುರುಷಾ ಇವ ॥

ವೃಕ್ಷಗಳ ಬಿಸಿಲಲ್ಲಿ ನಿಂತು ಬೇರೆ ಜೀವಿಗಳಿಗೆ ನೆರಳು ನೀಡುತ್ತವೆ; ಇನ್ನೊಬ್ಬರಿಗಾಗಿ ಹಣ್ಣುಗಳನ್ನೂ ಕೊಡುತ್ತವೆ. ಥೇಟ್ ಸತ್ಪುರುಷರ ಥರಾ.





## ಯೂರಿಯಾ ಎಂಬ ಮಾಯಾಪುಡಿಗೆ ಬೇವಿನ ರಸದ ಲೇಪನ

ಗಾಳಿಯಲ್ಲಿ ಸಾರಜನಕದ ಪಾಲು ಬಹುದೊಡ್ಡದು. ಅದು ಶೇಕಡಾ 80ರಷ್ಟಿರುತ್ತದೆ. ಅಷ್ಟೆಲ್ಲ ಇದ್ದರೂ ಸಸ್ಯಗಳು ಅವನ್ನು ನೇರವಾಗಿ ಹೀರಿಕೊಳ್ಳಲಾರವು. ಗಾಳಿಯನ್ನೇ ಹಿಂಡಿ, ಅದರಿಂದ ಸಾರಜನಕದ ಪುಡಿಯನ್ನು ತಯಾರಿಸಿದ ಶ್ರೇಯ ಜರ್ಮನ್ ವಿಜ್ಞಾನಿಗಳಿಗೆ ಸೇರುತ್ತದೆ. ಉಪ್ಪಿನಂತೆ ಕಾಣುವ ಆ ಪುಡಿಗೆ ನಾವು 'ಯೂರಿಯಾ' ಎನ್ನುತ್ತೇವೆ. ಅದಕ್ಕೆ 'ಕೃತಕ ಗೊಬ್ಬರ' ಅಥವಾ 'ಸರಕಾರಿ ಗೊಬ್ಬರ' ಎಂತಲೂ ಹೇಳುತ್ತಾರೆ. ಗೊಬ್ಬರವಾಗಿ ಅಷ್ಟೇ ಅಲ್ಲ, ಯೂರಿಯಾವನ್ನು ಇನ್ನೂ ನೂರೊಂದು ರೀತಿಯಲ್ಲಿ ಬಳಸಲಾಗುತ್ತಿದೆ. ಪಾತ್ರೆ ತೊಳೆಯುವ ಸಾಬೂನು, ಮುಖಕ್ಕೆ ಹಚ್ಚಿಕೊಳ್ಳುವ ಕ್ರೀಮು, ಪ್ಲಾಸ್ಟಿಕ್ ತಟ್ಟೆ, ಮೆಲಮೈನ್ ಪ್ಲೇಟು ಮತ್ತು ಸ್ಫೋಟಕ ಸಾಮಗ್ರಿಗಳಲ್ಲೂ ಬಳಸುತ್ತಾರೆ. ಅಷ್ಟೇ ಅಲ್ಲ, ಹಾಲಿನ ಡೇರಿ ನಡೆಸುವ ಕೆಲವರು ಹಸುವಿನ ಮೇವಿಗೆ ಮತ್ತು ಹಾಲಿಗೂ ಯೂರಿಯಾ ಬಿಳಿಪುಡಿಯ ಕಲಬೆರಕೆ ಮಾಡುತ್ತಿದ್ದರು. ಬೆಳೆ ಚೆನ್ನಾಗಿ ಬರಲೆಂದು ರೈತರಿಗೆ ಸರ್ಕಾರ ಅತಿ ಕಡಿಮೆ ದರದಲ್ಲಿ ನೀಡುವ ಯೂರಿಯಾ ಹೀಗೆಲ್ಲ ದುರುಪಯೋಗ ಆಗುತ್ತಿತ್ತು. ಇದನ್ನು ತಡೆಯುವುದು ಹೇಗೆ? ಕೊನೆಗೂ ಒಂದು ಉಪಾಯ ಹೊಳೆಯಿತು. ಉಪ್ಪಿನಂತೆ ಕಾಣುವ ಯೂರಿಯಾ ಕಣಗಳಿಗೆ ಬೇವಿನ ಕಹಿರಸವನ್ನು ಬೆರೆಸಿದರೆ ಆಯಿತು! ಬೇವಿನ ರಸ ಸಸ್ಯಗಳಿಗೆ ಒಳ್ಳೆಯದು, ಕೀಟಗಳಿಗೆ, ಪ್ರಾಣಿಗಳಿಗೆ ಕಹಿ. ಹೀಗೆ ಉಪಾಯ ಮಾಡಿ, ಕಾರ್ಖಾನೆಗಳಲ್ಲೇ ಯೂರಿಯಾಕ್ಕೆ ಬೇವಿನ ರಸದ ಲೇಪನ ಕೊಡಲು ಸರ್ಕಾರ ನಿರ್ಧರಿಸಿತು. ಆ ನಿರ್ಧಾರವನ್ನು ಜಾರಿಗೆ ತಂದವರು ಯಾರು ಗೊತ್ತೆ? 'ಅದಮ್ಯ ಚೇತನ'ದ ಸಂಸ್ಥಾಪಕ ಶ್ರೀ ಅನಂತ ಕುಮಾರ್. ಅವರು ಆಗ ಕೇಂದ್ರ ಸರ್ಕಾರದ ಕೆಮಿಕಲ್ ಮತ್ತು ರಸಗೊಬ್ಬರ ಖಾತೆಯ ಸಚಿವರಾಗಿದ್ದರು.

## ವಿಜ್ಞಾನ ರಸಪ್ರಶ್ನೆ:

'ಮಾಯಾಚೌಕ' ಎಂದರೆ ಏನೆಂದು ನಿಮಗೆಲ್ಲ ಗೊತ್ತೇ ಇದೆ. ಅಡ್ಡ, ಉದ್ದ, ಕರ್ಣ ಹೀಗೆ ಯಾವುದೇ ದಿಕ್ಕಿನಿಂದ ಆ ಸಾಲಿನ ಸಂಖ್ಯೆನ್ನು ಕೂಡಿದರೂ ಒಂದೇ ಮೊತ್ತ ಬರುವಂಥ ಚೌಕ. ಇದನ್ನು 3 x 3 ಮಾಡುವುದು ಸುಲಭ. 4 x 4 ಮಾಡುವುದು ತುಸು ಕಷ್ಟದ ಕೆಲಸ. ಆದರೆ ಇಲ್ಲೊಂದಿದೆ ನೋಡಿ ಅದ್ಭುತ ಮಾಯಾಚೌಕ!

| | | | |
|---|---|---|---|
| 96 | 11 | 89 | 68 |
| 88 | 69 | 91 | 16 |
| 61 | 86 | 18 | 99 |
| 19 | 98 | 66 | 81 |

ಇದನ್ನು ತಲೆಕೆಳಗಾಗಿ ಹಿಡಿದು ಅಥವಾ ಆಚೆ ಮಗ್ಗುಲಲ್ಲಿ ನೋಡಿ. ಹೇಗೆ ಬೇಕಾದರೂ ಕೂಡಿ. ಅಂಕಿಗಳ ಮೊತ್ತ ಅಷ್ಟೇ ಬರುತ್ತದೆ. ಎಷ್ಟು ಬರುತ್ತದೆ? ಕೂಡಿ ನೋಡಿ. ಸಾಧ್ಯವಿದ್ದರೆ ನೀವೇ ಒಂದು 3 x 3 ಮಾಯಾಚೌಕವನ್ನು ಸೃಷ್ಟಿ ಮಾಡಿ. ನೆನಪಿರಲಿ, ಎಲ್ಲ ಅಂಕಿಗಳೂ ಒಮ್ಮೆ ಮಾತ್ರ ಬರಬೇಕು. ಸಾಧ್ಯವೆ?

| | | |
|---|---|---|
| 1.69 | 1.82 | 2.91 |
| 4.67 | 4.81 | 3.05 |
| 5.82 | 5.06 | 4.28 |
| 6.36 | 5.19 | 4.57 |

ಕಳೆದ (ಆಗಸ್ಟ್) ಸಂಚಿಕೆಯ ರಸಪ್ರಶ್ನೆಗೆ ಉತ್ತರ: 4.81+5.19=10. ಜಾಣರು ಒಂದು ನಿಮಿಷದಲ್ಲಿ ಇದನ್ನು ಪತ್ತೆ ಹಚ್ಚಬಹುದು.



## ಉಪ್ಪುನೀರಿನಲ್ಲಿ ಕೆಲ್ಪಾರಣ್ಯ

ಸಮುದ್ರದಲ್ಲೂ ಅರಣ್ಯಗಳಿರುತ್ತವೆ ನಿಮಗೆ ಗೊತ್ತೆ? ತಟಕ್ಕೆ ಹೊಂದಿಕೊಂಡಂತೆ ಬಂಡೆಗಳಲ್ಲಿ ಪಾಚಿ ಬೆಳೆಯುತ್ತದೆ, ಅದು ನಮಗೆ ಗೊತ್ತಿದೆ. ಅದೇರೀತಿ ಸಮುದ್ರದ ಆಳಕ್ಕೆ ಹೋದಂತೆಲ್ಲ, ಉದ್ದುದ್ದ ಎಲೆಗಳ ಪೊದೆಗಳೂ ಉಪ್ಪು ನೀರಿನಲ್ಲಿ ಬೆಳೆದಿರುತ್ತವೆ. ಅಂಥ ಸಸ್ಯಗಳಲ್ಲಿ 30ಕ್ಕೂ ಹೆಚ್ಚು ಪ್ರಭೇದಗಳಿವೆ. ಅವನ್ನೆಲ್ಲ ಸೇರಿಸಿ 'ಕೆಲ್ಪ್' ಮತ್ತು 'ಕೆಲ್ಪ್ ಕಾಡು' ಎಂದು ಹೆಸರಿಸಿದ್ದಾರೆ. ಸಮುದ್ರದಲ್ಲಿ ಹಠಾತ್ ಆಳ ಜಾಸ್ತಿ ಇದ್ದರೆ ಹತ್ತಿಪ್ಪತ್ತು ಮೀಟರ್ ಎತ್ತರದ ದಟ್ಟ ಅರಣ್ಯವೇ ಅಲ್ಲಿ ಬೆಳೆಯುತ್ತದೆ. ಅದು ದಂಡೆಗೆ ಸಮಾನಾಂತರದಲ್ಲಿ ಹತ್ತಾರು ಕಿಲೊಮೀಟರ್ ದೂರದವರೆಗೆ ಚಾಚಿಕೊಂಡಿರುತ್ತದೆ. ನೆಲದ ಮೇಲಿನ ಅರಣ್ಯದ ಹಾಗೆಯೇ ಇವೂ ಪ್ರಕೃತಿ ರಕ್ಷಣೆಯ ಕೆಲಸವನ್ನೇ ಮಾಡುತ್ತವೆ. ಉಪ್ಪುನೀರಿನಲ್ಲಿ ಕರಗಿರುವ ಇಂಗಾಲದ ಡೈಆಕ್ಸೈಡನ್ನು ಹೀರಿಕೊಳ್ಳುತ್ತ, ಜಲಚರಗಳಿಗೆ ಅಗತ್ಯವಾದ ಆಮ್ಲಜನಕವನ್ನು ಸೂಸುತ್ತವೆ. ನಾನಾ ಬಗೆಯ ಮೀನು, ಏಡಿ, ಆಮೆಗಳಿಗೆ ಆಶ್ರಯ ಕೊಡುತ್ತವೆ.

ಅವಕ್ಕೂ ಅಪಾಯ ಬರುತ್ತಿದೆ. ಕೆಲ್ಪ್ ಅರಣ್ಯದ ಸೊಪ್ಪನ್ನು ಕತ್ತರಿಸಿ ತಂದು ಔಷಧ, ರಸಗೊಬ್ಬರಗಳನ್ನು, ಸೋಡಾಭಸ್ಮವನ್ನು ತಯಾರಿಸುವ ಉದ್ಯಮಗಳು ಎಲ್ಲೆಡೆ ಹೆಚ್ಚುತ್ತಿವೆ. ನದಿಗಳಿಗೆ ಪ್ಲಾಸ್ಟಿಕ್ ತ್ಯಾಜ್ಯಗಳನ್ನು, ಕೊಳಕು ವಿಷಗಳನ್ನು ಸೇರಿಸಿದರೆ ಅದೇ ನೀರು ಸಮುದ್ರದ ದಂಡೆಗುಂಟ ಶೇಖರವಾಗಿ ಈ ಅರಣ್ಯಕ್ಕೂ ಅಪಾಯ ತರುತ್ತದೆ. ಸಾಲದ್ದಕ್ಕೆ, ನಾವೆ, ಹಡಗುಗಳ ಓಡಾಟಕ್ಕೆ ತೊಂದರೆ ಆದೀತೆಂದು ಕೆಲ್ಪ್ ಕಾಡನ್ನು ನಾಶಮಾಡಲಾಗುತ್ತಿದೆ.

ನಮ್ಮ ಕೃತ್ಯದಿಂದ ಸಾಗರ ಜೀವಿಗಳಿಗೆ ಅಪಾಯ ಆಗಬಾರದು ತಾನೆ?

## ಈ ಮೊಟ್ಟೆಗಳು ಅಂಡಾಕಾರದ್ದೇ ಇರುತ್ತವೆ ಏಕೆ?

ಗೂಬೆಗಳು ಮರದ ಪೊಟರೆಗಳಲ್ಲಿ ಗೋಲಾಕಾರದ ಮೊಟ್ಟೆ ಇಡುತ್ತವೆ. ಕಡಲಾಮೆಗಳು ಮರಳಿನಲ್ಲಿ ಗುಂಡಿ ತೋಡಿ ಅದರಲ್ಲಿ ದುಂಡಗಿನ ಮೊಟ್ಟೆ ಇಡುತ್ತವೆ. ಆದರೆ ಕಾಗೆ, ನವಿಲು, ಪಾರಿವಾಳ ಅಥವಾ ಕೋಳಿಗಳು ಅಂಡಾಕಾರದ ಮೊಟ್ಟೆ ಇಡುತ್ತವೆ. ಏನು ಕಾರಣ? ಅದರ ಹಿಂದೆ ಒಂದು ಸ್ವಾರಸ್ಯಕರ ತರ್ಕ ಇದೆ. ಸಪಾಟು ನೆಲದ ಮೇಲೆ ಅಥವಾ ಮರದ ಮೇಲೆ ತೆರೆದ ಗೂಡುಗಳಲ್ಲಿ ಗೋಲಾಕಾರದ ಮೊಟ್ಟೆ ಇಟ್ಟರೆ ಆಚೀಚೆ ಉರುಳಿ ಹೋಗುವ ಸಂಭವ ಇರುತ್ತದೆ. ಅಂಡಾಕಾರದ ಮೊಟ್ಟೆಯನ್ನು ನೀವು ನೂಕಿದರೂ ಅದು ಉರುಳಿ ಹೋಗಲಾರದು. ಬದಲಿಗೆ ಇದ್ದಲ್ಲೇ ಸುತ್ತುತ್ತದೆ. ಕೋಳಿಯ ಮೊಟ್ಟೆಯನ್ನು ಉರುಳಿಸಿ ನೋಡಿ ಬೇಕಿದ್ದರೆ. ದೂರ ತಳ್ಳಲು ಸಾಧ್ಯವೇ ಇಲ್ಲ ಅದನ್ನು!

ಮರದ ಪೊಟರೆಯಲ್ಲಿ ಅಥವಾ ಮರಳಿನ ಗುಂಡಿಯಲ್ಲಿ ಮೊಟ್ಟೆ ಇಟ್ಟರೆ ಅದು ಎಲ್ಲೂ ಉರುಳಿ ಹೋಗಲಾರದು. ಅದಕ್ಕೇ ಅಂಥ ಸುರಕ್ಷಿತ ಪ್ರಸೂತಿ ಗೂಡುಗಳಲ್ಲಿ ಗೋಲ ಮೊಟ್ಟೆಗಳು ಕಂಡುಬರುತ್ತವೆ. ನೋಡಿದಿರಾ, ನಿಸರ್ಗದ ಲೆಕ್ಕಾಚಾರ ಎಷ್ಟು ಅಚ್ಚುಕಟ್ಟು!





## ಮೂರು ದೇಶಗಳಲ್ಲಿ 'ಎಂಜಿನಿಯರ್ಸ್ ಡೇ'

ವಿಜ್ಞಾನಿ-ಎಂಜಿನಿಯರ್- ಬೆಂಗಳೂರು-ಭಾರತರತ್ನ ಈ ನಾಲ್ಕು ಪದಗಳ ಹಿಂದಿನ ವಿಶಿಷ್ಟತೆಯನ್ನು ನೋಡಿ. 60 ವರ್ಷಗಳ ಹಿಂದೆ, 1954ರಲ್ಲಿ 'ಭಾರತರತ್ನ' ಪ್ರಶಸ್ತಿಯನ್ನು ನೀಡುವ ಸಂಪ್ರದಾಯ ಆರಂಭವಾಯಿತು. ಆ ಮೊದಲ ವರ್ಷವೇ ಬೆಂಗಳೂರಿನ ವಿಜ್ಞಾನಿ ಸರ್ ಸಿ.ವಿ.ರಾಮನ್ (ಭಾರತದ ಏಕೈಕ್ ನೊಬೆಲ್ ವಿಜ್ಞಾನಿ) ಅವರಿಗೆ ನೀಡಲಾಯಿತು. ಮರುವರ್ಷ ಬೆಂಗಳೂರಿನವರೇ ಆದ ಸರ್ ಎಮ್ ವಿಶ್ವೇಶ್ವರಯ್ಯನವರಿಗೆ! ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಜನ್ಮದಿನ ಸೆಪ್ಟೆಂಬರ್ 15ನ್ನು 'ಎಂಜಿನಿಯರ್‌ಗಳ ದಿನ' ಎಂದು ಇಡೀ ದೇಶದಲ್ಲಿ ಅಷ್ಟೇ ಅಲ್ಲ, ಶ್ರೀಲಂಕಾ ಮತ್ತು ತಾಂಜಾನಿಯಾ ದೇಶದಲ್ಲೂ ಆಚರಿಸಲಾಗುತ್ತಿದೆ. 1860ರಲ್ಲಿ ಜನಿಸಿದ್ದ ಅವರು ನೂರಾ ಎರಡು ವರ್ಷ ಅತ್ಯಂತ ಶಿಸ್ತುಬದ್ಧ ಜೀವನವನ್ನು ನಡೆಸಿ 1962ರ ಏಪ್ರಿಲ್ 12ರಂದು ಅಸ್ತಂಗತರಾದರು. ಅವರ ಸಾಧನೆಯ ಎಷ್ಟೊಂದು ನೆನಪುಗಳು ಕರ್ನಾಟಕದಲ್ಲಿವೆ, ಭಾರತದಲ್ಲಿವೆ. ಆಚಿನ ದೇಶಗಳಲ್ಲೂ ಇವೆ.

ಬೆಂಗಳೂರಿನಲ್ಲೇ ಕೆಲಸ ಮಾಡಿದ್ದ ಇನ್ನಿಬ್ಬರಿಗೆ ಈಚಿನ ವರ್ಷಗಳಲ್ಲಿ 'ಭಾರತ ರತ್ನ' ಪ್ರಶಸ್ತಿ ಲಭಿಸಿದೆ. ಒಬ್ಬರು ರಾಷ್ಟ್ರಪತಿ ಪದವಿಗೆ ಏರಿದ ಕ್ಷಿಪಣಿತಜ್ಞ (ಎಂಜಿನಿಯರ್) ಅಬ್ದುಲ್ ಕಲಾಂ. ಇನ್ನೊಬ್ಬರು ಅಂತರರಾಷ್ಟ್ರೀಯ ಖ್ಯಾತಿಯ ರಸಾಯನ ವಿಜ್ಞಾನಿ. ಈ ವಿಜ್ಞಾನಿಯ ಹೆಸರನ್ನು ಹೇಳಬಲ್ಲಿರಾ?

## ಅದಮ್ಯ ಚೇತನ

BBMP ಸಮುದಾಯ ಭವನ, ಗವಿಪುರ, ಬೆಂಗಳೂರು 560019

ಅದಮ್ಯ ಚೇತನ
Adamya Chetana

ಅದಮ್ಯಚೇತನ ಸಂಸ್ಥೆಯಿಂದ ದಿಂದ ಶಾಲಾ ಮಕ್ಕಳಿಗಾಗಿ ಪ್ರಕಾಶಿತವಾಗುವ ಗೋಡೆಪತ್ರಿಕೆ 'ಅದಮ್ಯ ಚೇತನ'.

© ಎಲ್ಲ ಹಕ್ಕುಗಳು ಅದಮ್ಯಚೇತನಕ್ಕೆ ಸೇರಿವೆ

ಸಂಪಾದಕರು: ನಾಗೇಶ ಹೆಗಡೆ ವಿನ್ಯಾಸ: ಶ್ರೀಪಾದ
ಮುದ್ರಣ: ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು
https://adamyachetana.org/
ಪ್ರಕಾಶಕರು: ತೇಜಸ್ವಿನಿ ಅನಂತಕುಮಾರ, ಅದಮ್ಯ ಚೇತನ

ಸಹಯೋಗ:
ಅನಂತಕುಮಾರ ಪ್ರತಿಷ್ಠಾನ
12, ಸುಮೇರು, ಎಮ್ ಎನ್ ಕೃಷ್ಣರಾವ್ ರಸ್ತೆ,
ಬಸವನಗುಡಿ,
ಬೆಂಗಳೂರು 560004
https://akp.org.in/